**ಸಮಗ್ರ ಶಿಕ್ಷಣ ಉಡುಪಿ**

ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,
ರಜತಾದ್ರಿ ಮಣಿಪಾಲ-576104, ಉಡುಪಿ ಜಿಲ್ಲೆ

ಫೋನ್/ಫ್ಯಾಕ್ಸ್: 08202575383 E Mail: ssaudupi@gmail.com

ದಿನಾಂಕ: 28.02.2022

## ದಿನಾಂಕ:28.02.2022ರಂದು ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ನಡೆದ ಇಕೋ ಕ್ಲಬ್‌ಗಳ ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆಯ ನಡಾವಳಿಗಳು:

ಸಭೆಯಲ್ಲಿ ಉಪಸ್ಥಿತರಿದ್ದವರು :

| | | |
|---|---|---|
| 1 | ಶ್ರೀ ಕೂರ್ಮಾರಾವ್ ಎಮ್ | ಮಾನ್ಯ ಜಿಲ್ಲಾಧಿಕಾರಿಯವರು, ಉಡುಪಿ |
| 2 | ಶ್ರೀ ಗೋವಿಂದ ಮಡಿವಾಳ | ಉಪನಿರ್ದೇಶಕರು ಸಾ.ಶಿ.ಇಲಾಖೆ, ಉಡುಪಿ |
| 3 | ಶ್ರೀ ಗೋವಿಂದ ಮಡಿವಾಳ | ಉಪನಿರ್ದೇಶಕರು (ಅಭಿವೃದ್ಧಿ) ಡಯಟ್ ಉಡುಪಿ |
| 4 | ಶ್ರೀ ಡಾ. ನಾಗಭೂಷಣ ಎಚ್ | ಜಿಲ್ಲಾ ಆರೋಗ್ಯಾಧಿಕಾರಿ |
| 5 | ಶ್ರೀ.ಎಸ್.ಎನ್. ಸತೀಶ್ ಬಾಬ ರೈ, | ಉಪ ಅರಣ್ಯ ಸಂರಕ್ಷಣಾಧಿಕಾರಿ ಉಡುಪಿ |
| 6 | ಶ್ರೀ ಡಾII. ಎಚ್ ಲಕ್ಷ್ಮೀಕಾಂತ | ಪರಿಸರ ಅಧಿಕಾರಿ. ಪ.ಮತ್ತು ಮಾ.ನಿಯಂತ್ರಣ ಮಂಡಳಿ ಉಡುಪಿ |
| 7 | ಶ್ರೀ ಶೇಷಪ್ಪ | ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಉಡುಪಿ |
| 8 | ಶ್ರೀಮತಿ ಭುವನೇಶ್ವರಿ | ತೋಟಗಾರಿಕಾ ಇಲಾಖೆ |
| 9 | ಶ್ರೀ ಚಂದ್ರನಾಯ್ಕ | ಉಪಯೋಜನಾ ಸಮನ್ವಯಾಧಿಕಾರಿ ಸ.ಶಿ.ಕ.ಉಡುಪಿ |
| 10 | ಶ್ರೀಮತಿ ನಿವೇದಿತಾ | ಇಕೋ ಕ್ಲಬ್ ಜಿಲ್ಲಾ ನೋಡಲ್ ಅಧಿಕಾರಿ |
| 11 | ಶ್ರೀಮತಿ ಸೌಂದರ್ಯ ರಾಜೇಶ್ವರಿ | ಅಧೀಕ್ಷಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಉಡುಪಿ |
| 12 | ಶ್ರೀಮತಿ ಲಕ್ಷ್ಮೀ ಬಾಯಿ | ಸಂಚಾಲಕರು ಭಾರತೀಯ ವಿಕಾಸ ಟ್ರಸ್ಟ್, ಮಣಿಪಾಲ |
| 13 | ಶ್ರೀ ಮೋಹನ ಆಚಾರ್ಯ | ಪ್ಲೋರ ಮತ್ತು ಫೋನಾ ಕುಂದಾಪುರ |
| 14 | ಉಡುಪಿ ಜಿಲ್ಲೆಯ ಎಲ್ಲಾ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು | |
| 15 | ಇಕೋ ಕ್ಲಬ್‌ನ ಸದಸ್ಯರು | |

ಶ್ರೀ ಕೂರ್ಮರಾವ್ ಎಂ ಮಾನ್ಯ ಜಿಲ್ಲಾಧಿಕಾರಿ, ಉಡುಪಿ ಇವರ ಅಧ್ಯಕ್ಷತೆಯಲ್ಲಿ ಇಕೋ ಕ್ಲಬ್‌ಗಳ ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆಯು ದಿನಾಂಕ:28.02.2022ರಂದು ಅಪರಾಹ್ಯ 12.30ಕ್ಕೆ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ನಡೆಯಿತು. ಸದ್ರಿ ಸಭೆಯಲ್ಲಿ ಉಪನಿರ್ದೇಶಕರು(ಆಡಳಿತ) ಹಾಗೂ ಸಮಿತಿಯ ಸದಸ್ಯರು ಭಾಗವಹಿಸಿದ್ದರು. ಪ್ರಾರಂಭದಲ್ಲಿ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲರನ್ನು ಸ್ವಾಗತಿಸಿದರು. ನಂತರ ಪ್ರಾಸ್ತಾವಿಕವಾಗಿ ಮಾತನಾಡಿ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಪ್ರಮುಖ ಗುರಿಗಳು, ಕಾರ್ಯಕ್ರಮದ ಉದ್ದೇಶ, ಕಾರ್ಯಕ್ರಮದ ಅನುಷ್ಠಾನದ ವಿಧಾನದ ಬಗ್ಗೆ ಸ್ಥೂಲವಾಗಿ ವಿವರಿಸಿದರು. 2021-22ನೇ ಸಾಲಿನಲ್ಲಿ ರಾಷ್ಟ್ರೀಯ ಹಸಿರುಪಡೆ ಕಾರ್ಯಕ್ರಮದಡಿ ಹಮ್ಮಿಕೊಳ್ಳಬೇಕಾದ ಚಟುವಟಿಕೆಗಳು, ಜಿಲ್ಲಾ ಹಂತದಲ್ಲಿ ಕೈಗೊಂಡ ಚಟುವಟಕೆಗಳು, ಅನುದಾನದ ಬಳಕೆಯ ವಿವರ, ಹಾಗೂ ಈ ವರ್ಷ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನೊಳಗೊಂಡು ವಲಯಕ್ಕೆ 60 ಶಾಲೆಗಳಂತೆ ಜಿಲ್ಲೆಯ 147 ಹಿರಿಯ ಪ್ರಾಥಮಿಕ ಶಾಲೆಗಳಿಗೆ ಮತ್ತು 153 ಪ್ರೌಢಶಾಲೆಗಳಿಗೆ ಒಟ್ಟು 300 ಶಾಲೆಗಳಿಗೆ ತಲಾ ರೂ5000/-ದಂತೆ ಎಂಪ್ರಿಯಿಂದ ಅನುದಾನ ಬಿಡುಗಡೆಯಾಗಿರುವ ಬಗ್ಗೆ ಸಭೆಗೆ ತಿಳಿಸಿದರು. ಎಂಪ್ರಿ ವತಿಯಿಂದ ಜಿಲ್ಲೆಯ ವಿವಿಧ ಶಾಲೆಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಆಯೋಜಿಸಲ್ಪಟ್ಟ ಕಾರ್ಯಕ್ರಮಗಳ ಬಗ್ಗೆ ವಿವರಣೆ ನೀಡಿದರು.

ಇಕೋ ಕ್ಲಬ್ ವತಿಯಿಂದ ಶಾಲೆಗಳಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮದ ಬಗ್ಗೆ ಸವಿವರವಾಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಲ್ಲೂರು ಕಾರ್ಕಳ ವಲಯ , ಇಲ್ಲಿನ ಮುಖ್ಯ ಶಿಕ್ಷಕರಾದ ಶ್ರೀ ನಾಗೇಶ್ ಕುಲಾಲ್ ಹಾಗೂ ಸ.ಹಿ.ಪ್ರಾ.ಶಾಲೆ ಕೆಳಾರ್ಕಳಬೆಟ್ಟು ಬ್ರಹ್ಮಾವರ ವಲಯ ಇಲ್ಲಿನ ಶ್ರೀಮತಿ ಸವಿತಾ. ಇವರು ಮಾಹಿತಿ ನೀಡಿದರು. ಈ ಕುರಿತು ಜಿಲ್ಲಾಧಿಕಾರಿಯವರು ಮೆಚ್ಚುಗೆ ವ್ಯಕ್ತಪಡಿಸಿ ನಿಮ್ಮ ಯೋಜನೆಗಳನ್ನು ಮುಂದುವರೆಸುವಂತೆ ಪ್ರೋತ್ಸಾಹಿಸಿದರು.

ಜಿಲ್ಲಾಧಿಕಾರಿಯವರು ಮಾತನಾಡುತ್ತ ಶಾಲಾಭಿವೃದ್ದಿಗೆ ಹಳೆ ವಿದ್ಯಾರ್ಥಿಗಳು, ಪೋಷಕರು. ಸರ್ಕಾರೇತರ ಸಂಸ್ಥೆಗಳು, ವಿವಿಧ ಸಂಸ್ಥೆಗಳ ಸಹಕಾರ ಪಡೆದು ಸಾರ್ವಜನಿಕರ ಸಹಭಾಗಿತ್ವದಲ್ಲಿ, ಶಾಲೆಯ ಅಭಿವೃದ್ದಿಗೆ ಪೂರಕವಾಗಿ, ಪರಿಸರ ಸ್ನೇಹಿ ಶಾಲಾ ವಾತಾವರಣವನ್ನು ನಿರ್ಮಿಸುವಲ್ಲಿ ಎಲ್ಲರೂ ಪ್ರಯತ್ನಿಸ ಬೇಕೆಂದು ಸಲಹೆ ನೀಡಿದರು. ಸದರಿ ಸಭೆಯಲ್ಲಿ ಸದಸ್ಯರೆಲ್ಲರ ಸಮಕ್ಷಮದಲ್ಲಿ ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಗಳನ್ನು ಅಂಗೀಕರಿಸಲಾಯಿತು:

1. ಸರಕಾರಿ ಪ್ರೌಢ ಶಾಲೆ ಹಕ್ಲಾಡಿ ಹಾಗೂ ಸ.ಹಿ.ಪ್ರಾ.ಶಾಲೆ ನಲ್ಲೂರು ಕಾರ್ಕಳ ಇಲ್ಲಿ ಮುಖ್ಯೋಪಾಧ್ಯಾಯರು ನಮ್ಮ ಶಾಲೆಯಲ್ಲಿ ನೈಸರ್ಗಿಕವಾಗಿ ಉತ್ತಮ ವಾತಾವರಣವಿದ್ದು ಪ್ರಕೃತಿದತ್ತವಾದ ನೀರಿನ ಸೌಲಭ್ಯ ಇದೆ. ಈ ನೀರನ್ನು ವಿದ್ಯುತ್‌ಚ್ಛಕ್ತಿ ಮೂಲಕ ಬಳಸಿಕೊಂಡು ವಿದ್ಯಾರ್ಥಿಗಳ ದಾಸೋಹ ಕಾರ್ಯಕ್ರಮಕ್ಕೆ ತರಕಾರಿ, ಹಣ್ಣು-ಹಂಪಲುಗಳನ್ನು ಬೆಳೆಸಬಹುದಾಗಿದೆ. ನೀರಿನ ಅಳವಡಿಕೆಗಾಗಿ ತಗಲುವ ವಿದ್ಯುತ್ ವೆಚ್ಚದ ಬಿಲ್ಲಿನಿಂದ ಕೆ.ಇ.ಬಿ. ವಿನಾಯಿತಿ ನೀಡಿದರೆ ಬಹಳ ಪ್ರಯೋಜನವಾಗುತ್ತದೆ. ವಿದ್ಯುತ್ ಬಿಲ್ಲು ಪಾವತಿಸಲು ಅನುದಾನ ಕೊರತೆ ಇರುವುದರಿಂದ ಸಮಸ್ಯೆಯಾಗುತ್ತದೆ ಎಂದು ತಮ್ಮ ಅನಿಸಿಕೆಗಳನ್ನು ತಿಳಿಸಿದರು.

ಈ ಸಂಬಂಧ ಮಾನ್ಯ ಜಿಲ್ಲಾಧಿಕಾರಿಗಳು ಕೆ.ಇ.ಬಿ. ಬಿಲ್ಲು ಸಂದಾಯಿಸಬೇಕಾಗಿರುವುದು ಮೆಸ್ಕಾಂ ವ್ಯವಸ್ಥೆಯಾಗಿದ್ದು ಇದರಿಂದ ವಿನಾಯಿತಿ ಕೋರಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ ಇದರ ಬಾಬ್ತು ಪರ್ಯಾಯವಾಗಿ ಸರ್ಕಾರೇತರ ಸಂಸ್ಥೆಗಳಿಂದ, ಸ್ಥಳೀಯ ದಾನಿಗಳಿಂದ ದೇಣಿಗೆ ಸಂಗ್ರಹಿಸುವುದರ ಮೂಲಕ ಕೆ.ಇ.ಬಿ. ಬಿಲ್ಲು ಪಾವತಿಸಲು ನಿಧಿ ಸ್ಥಾಪಿಸಬಹುದು . ಈ ಕುರಿತಾಗಿ ಕಾರ್ಯೋನ್ಮುಖರಾಗಲು ಸಲಹೆ ನೀಡಿದರು.

2. ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಪ್ರತಿ ಶಾಲೆಯ ಸ್ವಯಂ ಮೌಲ್ಯಮಾಪನ ಮಾಡುವುದು ಇತ್ತೀಚಿನ ಕಾಲ ಘಟ್ಟದಲ್ಲಿ ತೀರಾ ಅಗತ್ಯವಿದೆ. ಈ ಸಂಬಂಧ ಉಪನಿರ್ದೇಶಕರು ಆದ್ಯ ಗಮನಹರಿಸಿ ಶಾಲೆಯ ಸ್ವಮೌಲ್ಯಮಾಪನ ವರದಿ ಸಿದ್ದಪಡಿಸಲು ನಿಗಧಿತ ನಮೂನೆಯನ್ನು ತಯಾರಿಸಿಕೊಡಲು ಉಪನಿರ್ದೇಶಕರು (ಆಡಳಿತ) ಹಾಗೂ ಶಿಕ್ಷಣ ಇಲಾಖೆಯ ಇತರೆ ಅಧಿಕಾರಿಯವರು ಕ್ರಮ ವಹಿಸಲು ಹಾಗೂ ಉತ್ತಮ ಪ್ರಗತಿಯನ್ನು ಸಾಧಿಸಿದ ಶಾಲೆಗಳನ್ನು ಗುರುತಿಸಿ ಪ್ರೋತ್ಸಾಹಿಸುವಂತೆ ಉಪನಿರ್ದೇಶಕರಿಗೆ ಜಿಲ್ಲಾಧಿಕಾರಿಯವರು ಸೂಚಿಸಿದರು.

3. ಸಾಮಾಜಿಕ ಅರಣ್ಯ ಸಂರಕ್ಷಣಾಧಿಕಾರಿಯವರನ್ನು ಉದ್ದೇಶಿಸಿ ತಮ್ಮ ಇಲಾಖಾ ವತಿಯಿಂದ ಶಿಕ್ಷಣ ಇಲಾಖೆಯ ಶಾಲೆಗಳಲ್ಲಿ ಹಮ್ಮಿಕೊಂಡ ಕಾರ್ಯಕ್ರಮದ ವಿವರ ಪಡೆದರು. ಹಾಗೂ ಶಾಲೆಯ ಸುತ್ತಲೂ ಪೂರ್ಣ ಪ್ರಮಾಣದ ಕಂಪೌಂಡು, ನೀರಿನ ಲಭ್ಯತೆ, ಹೊಂದಿರುವ ಶಾಲೆಗಳನ್ನು ಉಪನಿರ್ದೇಶಕರ ಹಂತದಲ್ಲಿ ಗುರುತಿಸಿ ಜ್ಞಾಪನದೊಂದಿಗೆ ಸಾಮಾಜಿಕ ಅರಣ್ಯ ಇಲಾಖೆಗೆ ಶಾಲಾ ಪಟ್ಟಿಗಳನ್ನು ಒದಗಿಸುವುದು.. ಶಿಕ್ಷಣ ಇಲಾಖೆಯಿಂದ ಪಡೆದ ಪಟ್ಟಿಯಂತೆ ಸಂಬಂಧಿಸಿದ ಅರಣ್ಯ ಇಲಾಖೆಯವರು ಸ್ಥಳೀಯವಾಗಿ ಲಭ್ಯತೆ ಇರುವ ಗಿಡಗಳನ್ನು ಉದಾ: ತೆಂಗು, ಸಾಗುವಾನಿ, ಹಲಸು, ಹೆಬ್ಬಲಸು, ಇಂತಹ ಗಿಡಗಳನ್ನು ನೆಡುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಪರಿಸರ ಪ್ರೇಮವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುವುದು. ಈ ಬಗ್ಗೆ ನಿರ್ದಿಷ್ಟ ಗುರಿಯೊಂದಿಗೆ ಕ್ರಮ ವಹಿಸುವಂತೆ ಮಾನ್ಯ ಜಿಲ್ಲಾಧಿಕಾರಿಯವರು ಸಾಮಾಜಿಕ ಅರಣ್ಯ ಇಲಾಖೆಯವರಿಗೆ ಸೂಚಿಸಿದರು.

4. ಶಾಲೆಗಳಲ್ಲಿ ಪೌಷ್ಟಿಕ ತೋಟವನ್ನು ಆರಂಭಿಸಲು ಶಾಲಾ ಹಾಗೂ ತೋಟಗಾರಿಕಾ ಇಲಾಖಾ ಜಂಟಿ ಆಶ್ರಯದೊಂದಿಗೆ ಶಾಲೆಗಳಲ್ಲಿ ತೋಟಗಾರಿಕೆಯನ್ನು ಸ್ಥಳಾವಕಾಶದ ಆದ್ಯತೆ ಮೇರೆಗೆ ನಿರ್ವಹಿಸುವಂತೆ ಜಿಲ್ಲಾಧಿಕಾರಿಗಳು ತೋಟಗಾರಿಕೆ ಇಲಾಖೆಯವರಿಗೆ ಸೂಚಿಸಿದರು. ಹಾಗೂ ಪ್ರಾದೇಶಿಕವಾಗಿ ಬೆಳೆಯಬಹುದಾದ, ನುಗ್ಗೆ, ಬಸಳೆ, ಸೊಪ್ಪು ಪದಾರ್ಥಗಳನ್ನು ಬೆಳೆಸಿ ಶಾಲಾ ವಿದ್ಯಾರ್ಥಿಗಳ ದಿನ ನಿತ್ಯದ ಬಳಕೆಗೆ ಸಹಕಾರಿಯಾಗುವುದೆಂದು ತಿಳಿಸಿದರು. ತೋಟಗಾರಿಕಾ ಇಲಾಖಾ ವತಿಯಿಂದ ಕೂಡಲೇ ಕ್ರಮವಹಿಸುತ್ತೇವೆಂದು ಹೇಳಿದರು.

5. ಸರ್ಕಾರೇತರ ಸಂಸ್ಥೆಯಾದ ಫ್ಲೋರಾ ಅಂಡ್ ಫೋನಾ ಸಂಸ್ಥೆಯ ಸದಸ್ಯರಾದ ಶ್ರೀ ಮೋಹನ ಆಚಾರ್ಯರವರು ಮಾತನಾಡಿ ತಾವು ಜಿಲ್ಲೆಯ ಆಯ್ದ ಶಾಲೆಗಳಲ್ಲಿ ಪರಿಸರ ತಜ್ಞರಿಂದ ಕಾರ್ಯಗಾರವನ್ನು ಹಮ್ಮಿಕೊಂಡು ಒಂದು ದಿನ ಶಾಲಾ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಕುರಿತು ಸಮಗ್ರ ಮಾಹಿತಿ ನೀಡುತ್ತೇವೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು. ಈ ಕುರಿತು ಜಿಲ್ಲಾಧಿಕಾರಿಯವರು ತಮ್ಮ ಸಂಸ್ಥೆಯ ಈ ಕಾರ್ಯ ಶ್ಲಾಘನೀಯವಾದದ್ದು ಇನ್ನು ಮುಂದೆಯೂ ನಿಮ್ಮ ಸಹಕಾರ ಇದೇ ರೀತಿ ಮುಂದುವರಿಯಲಿ ಎಂದು ತಿಳಿಸಿದರು.

6. ಶ್ರೀ ಸಿದ್ದಿ ವಿನಾಯಕ ವಸತಿ ಶಾಲೆ ಹಟ್ಟಿಯಂಗಡಿ ಇಲ್ಲಿನ ಪ್ರಾಂಶುಪಾಲರಾದ ಶ್ರೀ ಶರಣಕುಮಾರ್‌ರವರು ಮಾತನಾಡಿ ಕೊರೋನಾ ಸಂದರ್ಭ ಎಲ್ಲರೂ ಕಡ್ಡಾಯವಾಗಿ ಮುಖಗವಸು(ಮಾಸ್ಕ್) ನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳುವುದರೊಂದಿಗೆ ಬಳಕೆ ಮಾಡಿದ ನಂತರ ಅದರ ವಿಲೇವಾರಿಯನ್ನು ಕೂಡಾ ವ್ಯವಸ್ಥಿತವಾಗಿ ಮಾಡುವ ಕುರಿತು ಜಾಗೃತಿ ಮೂಡಿಸುವುದರೊಂದಿಗೆ ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ನಿಮ್ಮ ಸಲಹೆ ಬಹಳ ಉಪಯುಕ್ತವಾಗಿದೆ, ಹೆಚ್ಚಿನ ಜನರಲ್ಲಿ

ಅರಿವು ಮೂಡಿಸುತ್ತಿದ್ದೇವೆ. ಇನ್ನು ಹೆಚ್ಚಿನ ಕ್ರಮ ವಹಿಸಲು ವಿವಿಧ ಇಲಾಖಾಧಿಕಾರಿಗಳಿಗೆ ಮಾನ್ಯ ಜಿಲ್ಲಾಧಿಕಾರಿಯವರು ತಿಳಿಸಿದರು.

7. ನಿವೃತ್ತ ಪ್ರಾಂಶುಪಾಲರಾದ ಶ್ರೀಮತಿ ಲಕ್ಷ್ಮೀಬಾಯಿಯವರು ತಮ್ಮ ಸುದೀರ್ಘವಾದ ಸೇವಾವಧಿಯಲ್ಲಿ, ವಿದ್ಯಾರ್ಥಿಗಳಲ್ಲಿ ಸ್ವಚ್ಚತೆ, ಪರಿಸರ ಸಂರಕ್ಷಣೆ, ಶುದ್ದ ಕುಡಿಯುವ ನೀರಿನ ಬಳಕೆ ಕುರಿತಾಗಿ ಸಾಕಷ್ಟು ಅರಿವು ಮೂಡಿಸುವುದರೊಂದಿಗೆ ಕಾರ್ಯಗತಗೊಳಿಸುವಲ್ಲಿ ಪ್ರಯತ್ನಿಸುತ್ತಿರುತ್ತೇನೆಂದು ತಮ್ಮ ಅನುಭವವನ್ನು ಹಂಚಿಕೊಂಡರು ಈ ಕುರಿತು ಜಿಲ್ಲಾಧಿಕಾರಿಯವರು ಮೆಚ್ಚುಗೆ ವ್ಯಕ್ತಪಡಿಸಿದರು.
8. ಜಿಲ್ಲಾ ಮಟ್ಟದಲ್ಲಿ ಉತ್ತಮ ಇಕೋ ಕ್ಲಬ್ ಎಂದು ಆಯ್ಕೆಗೊಂಡ 10 ಶಾಲೆಗಳಿಗೆ ಪ್ರೋತ್ಸಾಹದಾಯಕವಾಗಿ ಉತ್ತೇಜಿಸಲು ಮಾನ್ಯ ಜಿಲ್ಲಾಧಿಕಾರಿಯವರು ನಗದು ಪುರಸ್ಕಾರದೊಂದಿಗೆ ಸ್ಮರಣಿಕೆಯನ್ನು ನೀಡಿ ಗೌರವಿಸಿದರು.
9. ಮುಕ್ತಾಯದ ಹಂತದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಉಪಯೋಜನಾ ಸಮನ್ವಯಾಧಿಕಾರಿಗಳು ಧನ್ಯವಾದ ಸಮರ್ಪಣೆ ಸಲ್ಲಿಸುವುದರೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

( ಕೂರ್ಮಾರಾವ್ ಭಾ.ಆ.ಸೇ)
ಜಿಲ್ಲಾಧಿಕಾರಿ,
ಉಡುಪಿ ಜಿಲ್ಲೆ, ರಜತಾದ್ರಿ, ಮಣಿಪಾಲ